ರುತ್ತೀರಿ ಅದನ್ನು ತಿಳಿಸಿರುತ್ತೀರಿ. ಇನ್ನು ಉಳಿದ ಪ್ರದೇಶಗಳಲ್ಲಿ ರೈಲು—ರಸ್ತೆ ಸಾಲಿಗೆ ಏನಾದರೂ ಕಾರ್ಯಕ್ರಮಗಳನ್ನು ಕೈಗೊಂಡಿದ್ದರೆ ಅದರಬಗ್ಗೆ ತಿಳಿಸುತ್ತೀರಾ ಎಂದು ಕೇಳುತ್ತೇನೆ.

†ಶ್ರೀ ಧರ್ಮಸಿಂಗ್ —ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಈಗಾಗಲೇ ೨೦ ಸ್ಲಮ್ಸ್ ಇದೆ ಎಂದು ಹೇಳಿರುತ್ತೇವೆ, ಪುಂಡ್ಯದಲ್ಲಿರತಕ್ಕಂಥ ಆ ಸ್ಲಮ್ಸ್‌ಗೆ ನಾನೂ ಕೂಡ ಅವರ ಜೊತೆಯಲ್ಲಿ ಹೋಗಿದ್ದೆ. ಈಗಾಗಲೇ ಅಲ್ಲಿಯ ಅಭಿವೃದ್ಧಿ ಗೋಸ್ಕರವಾಗಿ ಏಳುಲಕ್ಷ ಮೂವತ್ತಾರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳಿದಂತೆ ಹುಡ್ಕೋ ಸಂಸ್ಥೆಯಿಂದ ೫೦ ಲಕ್ಷ ೭೨೦ ಟೆನೆಮೆಂಟ್ಸ್‌ಗೆ ಸಹಾಯಧನ ಕೊಡಬೇಕೆಂದು ಕೇಳಿರುತ್ತೇವೆ. ಇನ್ನು ಮುಂದೆ ದಲ್ಲಿ ಮಾಡಲು ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ ಇಷ್ಟು ಕೆಲಸಕಾರ್ಯಗಳು ಈಗಾಗಲೇ ಮಾಡಿದ್ದೇವೆ. ಇನ್ನು ೫೨ ಲಕ್ಷ ರೂಪಾಯಿಗಳನ್ನು ಇನ್ನು ೫-೬ ತಿಂಗಳಲ್ಲಿಯೇ ಕೊಡತಕ್ಕಂಥ ಯೋಜನೆ ಇದ್ದು ಇದರಿಂದ ಸುಮಾರು ೭೨೦ ಜನರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಎಂ. ಎಸ್. ಆತ್ಮಾನಂದ್.—ಅಧ್ಯಕ್ಷರೇ ಈ ಕೊಳಚೆ ಪ್ರದೇಶಗಳಲ್ಲಿ ಬೇಕಾದಷ್ಟು ಜನರು ವಾಸಮಾಡುತ್ತಿರುತ್ತಾರೆ. ವಾಸ್ತವವಾಗಿ ಅವರಿಗೆ ಸರ್ಕಾರದವರು ಒಂದು ಲೆ ಔಟನ್ನು ನಿರ್ಮಿಸಿ ಅವರಿಗೆ ಕನ್‌ಫರ್ಮ್ ಮಾಡುವ ಬಗ್ಗೆ ಸೂಕ್ತ ಕ್ರಮ ತಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಈಗಾಗಲೇ ನಮಗೆ ನಗರಸಭೆಯವರು ೧೬ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಒಂದು ಯೋಜನೆ ಮಾಡಿದ್ದೇವೆ. ಸಕ್ಕರೆ ಫ್ಯಾಕ್ಟರಿಯ ಹತ್ತಿರದಲ್ಲಿ ರತಕ್ಕಂಥ ಸ್ಲಮ್‌ನವರಿಗೂ ಕೂಡ ಸಹಾಯ ಮಾಡತಕ್ಕಂಥದ್ದನ್ನೂ ಕೂಡ ಹೇಳಿದ್ದಾರೆ. ಅದನ್ನೂ ಕೂಡ ತೆಗೆದುಕೊಳ್ಳಬೇಕೆಂದು ಇರುತ್ತೇವೆ ಈ ರೀತಿ ಯಾಗಿ ೨೦ ಸಾವಿರ ಜನಗಳಲ್ಲಿ ಈಗಾಗಲೇ ನಾಲ್ಕು ಸಾವಿರ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ೭೨೦ ಟೆನಮೆಂಟ್ಸ್ ಇಂಪ್ರೂವ್‌ಮೆಂಟ್‌ಗಾಗಿ ೮ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ರೈಲ್ವೆ-ರಸ್ತೆಕ್ಕೆ ದುಡ್ಡನ್ನು ಒದಗಿಸಿಕೊಟ್ಟಿದ್ದೇವೆ.

Godown for Mangalore City.

479 SRI K. RAMBHAT (Puttur)—Will the Minister for Revenue, be pleased to state.—

(*a*) whether it is a fact that Food Corporation of India has requested for sanction of land for construction of 50,000 metric tonnnes capacity Warehouse around Mangalore.

(*b*) whether the Government of Karnataka has agreed to give the land for this purpose,

(*c*) if the consent has not been given, the reason for the same

(*d*) whether the Government propose to give land to the Food Coporation of India in South Kanara district?

SRI MALLIKARJANA M. KHARGE. –(Minister for Revenue)

(*a*) Yes.

(*b*) Consent has not been given.

(*c*) All lands which come under the jurisdiction of the New Mangalore Port have been acquired under the Land Acquisition Act and has already been handed over to the Karnataka Industrial

Development Board. Therefore, no land is available to give to the Food Corporation of India as requested by them.

(d) If the Food Coporation of India requests for allotment of any other available land in South Kanara district, immediate action will be taken by the Government to allot such land to the Corporation

ಶ್ರೀ ಕೆ. ರಾಮಭಟ್.—ಭಾರತದ ಆಹಾರ ನಿಗಮದವರು ಈ ಸ್ಥಳದಲ್ಲಿ ಯಾವಾಗ ಜಾಗವನ್ನು ಕೇಳಿದರು. ಎಷ್ಟು ಎಕರೆ ಜಾಗವನ್ನು ಅವರು ಕೇಳಿದರು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಡ್ ಕಾರ್ಪೊರೇಷನ್‌ನ ಡಿಸ್ಟ್ರಿಕ್ಟ್ ಮ್ಯಾನೇಜರ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಅವರ ಪತ್ರ ಸಂಖ್ಯೆ ೧೧-೨-೭೮-೭೯ ದಿನಾಂಕ ೩೦-೪-೭೯ ರಂದು ಬರೆದ ಪತ್ರದ ಮುಖೇನ ಕೇಳಿದ್ದಾರೆ.

ಶ್ರೀ ಕೆ. ರಾಮಭಟ್.—ಅವರು ಎಷ್ಟು ಎಕರೆ ಜಾಗವನ್ನು ಕೇಳಿದ್ದಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಎಷ್ಟು ಎಕರೆ ಕೇಳಿದ್ದಾರೆ ಎಂಬ ವಿವರ ನನ್ನಲ್ಲಿ ಇಲ್ಲ. ತಮಗೆ ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಕೆ. ರಾಮಭಟ್.—ತಮ್ಮಲ್ಲ ವಿವರ ಇಲ್ಲ ಎಂದರೆ ಹೇಗೆ? ತಮ್ಮ ಉತ್ತರದಲ್ಲಿ ಇಲ್ಲಿ ಜಾಗವನ್ನು ಕೊಡುವುದಕ್ಕೆ ಅನುಕೂಲ ಇಲ್ಲ ಎಂದು ಹೇಳಿದ್ದೀರಿ. ಅಂದಮೇಲೆ ಅವರು ಎಷ್ಟು ಜಾಗ ಬೇಕು ಎಂದು ಕೇಳಿದ್ದಾರೆಂಬುದನ್ನು ಹೇಳಬೇಕು. ತಾವು ಸರ್ಕಾರದ ವತಿಯಿಂದ ಏನು ಉತ್ತರವನ್ನು ಕೊಟ್ಟಿದ್ದೀರಿ ಅದನ್ನು ನೋಡಿ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈಗ ಅಲ್ಲಿ ಇರತಕ್ಕಂತಹ ಜಾಗವನ್ನು ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿಯ ಅಧಿಕಾರಕ್ಕೆ ಹಿಂದೆಯೇ ಬಿಟ್ಟುಕೊಡಲಾಗಿದೆ. ಈ ಸ್ಥಳವನ್ನು ಬಿಟ್ಟು ಬೇರೆ ಯಾವುದಾದರೂ ಸ್ಥಳವನ್ನು ಕೇಳುವುದಾದರೆ ಅದನ್ನು ನಾವು ಒದಗಿಸಿಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಈ ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ ನಮ್ಮ ರಾಜ್ಯ ಸರ್ಕಾರದ ಅಧೀನದಲ್ಲಿ ಇರತಕ್ಕ ಒಂದು ಸಂಸ್ಥೆ. ಅವರಿಂದ ಈ ಜಾಗವನ್ನು ಪಡೆದುಕೊಂಡು ಇವರಿಗೆ ಕೊಡುವ ಬಗ್ಗೆ ಪ್ರಸ್ತಾಪ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸರ್ಕಾರದ ಅಧೀನದಲ್ಲಿ ಏನು ಜಾಗ ಇರುತ್ತದೆ ಅದನ್ನು ಕೊಡತಕ್ಕದ್ದು ರೆವಿನ್ಯೂ ಇಲಾಖೆಯ ಕರ್ತವ್ಯ. ಒಂದು ಸಲ ಜಾಗವನ್ನು ಹ್ಯಾಂಡ್ ಓವರ್ ಮಾಡಿದ ಮೇಲೆ, ಅದು ಅವರ ಅಧೀನಕ್ಕೆ ಸೇರುತ್ತದೆ. ಕೈಗಾರಿಕಾಭಿವೃದ್ಧಿ ಮಂಡಳಿಯವರ ಹತ್ತಿರ ಏನಾದರೂ ಹೆಚ್ಚು ಜಾಗ ಇದ್ದು, ಅದನ್ನು ಆಹಾರ ನಿಗಮದವರು ಬಂದು ಕೇಳಿದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ ರಾಮಭಟ್.—ಅವರು ಕೇಳುವವರೆಗೂ ನಾವು ಕಾಯಬೇಕೇ? ಅವರೇ ೫೦ ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣ ಕಟ್ಟಲು ಮುಂದೆ ಬಂದಾಗ ನಾವೇ ಜಾಗವನ್ನು ಬಿಟ್ಟುಕೊಟ್ಟು ಸ್ವಾಗತಿಸಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಅಲ್ಲಿನ ಜಾಗ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿದ್ದು ಅದನ್ನು ಕೈಗಾರಿಕಾಭಿವೃದ್ಧಿ ಮಂಡಲಿಯವರು ಕೇಳಿದಾಗ ಅವರಿಗೆ ಬಿಟ್ಟುಕೊಡಲಾಯಿತು, ಅಲ್ಲಿ ಬೇರೆ ಸ್ಥಳ ಇಲ್ಲದ ಕಾರಣ ಈ ಸ್ಥಳವನ್ನೇ ಅವರಿಗೆ ಬಿಟ್ಟುಕೊಟ್ಟಿದ್ದೇವೆ. ಇವರಿಗೆ ಅಲ್ಲಿ ಬೇರೆ ಯಾವುದಾದರೂ ಜಾಗ ಅಲ್ಲಿ ಕೇಳಿದರೆ ಅದನ್ನು ಒದಗಿಸಿಕೊಡುತ್ತೇವೆ, ಕೈಗಾರಿಕಾಭಿವೃದ್ಧಿ ಮಂಡಲಿಯವರಲ್ಲೇನಾದರೂ ಹೆಚ್ಚು ಜಾಗ ಇದ್ದಲ್ಲಿ ಅದನ್ನು ಇವರಿಗೆ ಒದಗಿಸಿಕೊಡುವ ಬಗ್ಗೆ ಪ್ರಯತ್ನ ಮಾಡುತ್ತೇವೆ.